**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ವಿಶೇಷ ಮೊಕದ್ದಮೆ.468/2022**

ಪ್ರಾ.ಸಾ. ಃ **13**

ದೋ.ಸಾ. ಃ **17**

ದಿ.**09.03.2026.**

ಹೆಸರು ಃ ಕೆ.ಎ.ಶಮೀನ್

ಗಂಡನ ಹೆಸರು ಃ ಟಿ.ಎಂ.ಅಫ್ರೋಜ್

ವಯಸ್ಸು ಃ **52** ವರ್ಷ

ಉದ್ಯೋಗ ಃ ಪಿಎಸ್ಐ, ನೊಣವಿನಕೆರೆ ಪೋಲೀಸ್ ಠಾಣೆ

ವಾಸಸ್ಥಳ ಃ ತಿಪಟೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ದಿ.20.11.2019 ರಿಂದ 07.04.2025 ರವರೆಗೆ ನಾನು ತುಮಕೂರು ಸಿಇಎನ್ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಉಪ ನಿರೀಕ್ಷಕಳಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿ.06.06.2022 ರಂದು ಬೆಳಿಗ್ಗೆ 11.00 ಗಂಟೆ ಸಮಯದಲ್ಲಿ ಠಾಣಾ ಹೆಚ್ ಸಿ 388 ಶಾಂತಕುಮಾರ್ ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಸ್ವೀಕರಿಸಿ, ಠಾಣಾ ಮೊ.ನಂ.57/2022 ರಲ್ಲಿ ಪ್ರಕರಣವನ್ನು ದಾಖಲಿಸಿ, ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಪ್ರತಿಯನ್ನು ಮೇಲಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ನಿಶಾನೆ ಪಿ**24** ಸದರಿ ದೂರು ಆಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**24**(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**33** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**33**(ಎ) ಎಂದು ಗುರುತಿಸಲಾಯಿತು.

3. ನಂತರ ಪ್ರಕರಣದ ದಾಳಿಗೆ ಹೋಗಲು ನನ್ನ ಮೇಲಧಿಕಾರಿಗಳಿಗೆ ವರದಿಯನ್ನು ಸಲ್ಲಿಸಿರುತ್ತೇನೆ. ಆ ವರದಿಯನ್ನು ಈಗ ನೋಡುತ್ತಿದ್ದು ನಿಶಾನೆ ಪಿ**34** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**34(**ಎ**)** ಎಂದು ಗುರುತಿಸಲಾಯಿತು. ನಂತರ ದಾಳಿಗೆ ಪತ್ರಾಂಕಿತ ಅಧಿಕಾರಿಗಳು ಮತ್ತು ಪಂಚರು ಬೇಕಾಗಿದ್ದರಿಂದ ಆಯುಕ್ತರು, ಮಹಾನಗರ ಪಾಲಿಕೆಗೆ ಪತ್ರಾಂಕಿತ ಅಧಿಕಾರಿ ಮತ್ತು ಇಬ್ಬರು ನೌಕರರನ್ನು ಕಳುಹಿಸಲು ಕೋರಿಕೆ ಪತ್ರವನ್ನು ನೀಡಿರುತ್ತೇನೆ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**35** ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**35(**ಎ**)** ಎಂದು ಗುರುತಿಸಲಾಯಿತು. ನಂತರ ಕಾನೂನು ಮಾಪನ ಇಲಾಖೆಯ ನಿರೀಕ್ಷಕರಿಗೆ ತೂಕ ಮಾಡಲು ಅಧಿಕಾರಿಯನ್ನು ಕಳುಹಿಸಲು ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ**23** ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**23(**ಎ**)** ಎಂದು ಗುರುತಿಸಲಾಯಿತು.

4. ಮಹಾನಗರ ಪಾಲಿಕೆಯ ಆಯುಕ್ತರು ಪತ್ರಾಂಕಿತ ಅಧಿಕಾರಿ ಮತ್ತು ನೌಕರರನ್ನು ನೇಮಕ ಮಾಡಿದ ಬಗ್ಗೆ ಪತ್ರ ನೀಡಿರುತ್ತಾರೆ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಶಾನೆ ಪಿ**1** ಎಂದು ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಶಾನೆ ಪಿ**1(**ಎ**)** ಎಂದು ಗುರುತಿಸಲಾಯಿತು. ಕಾನೂನು ಮಾಪನ ಇಲಾಖೆಯಿಂದ ರಾಘವೇಂದ್ರ ಎಂಬುವವರನ್ನು ಕಳುಹಿಸಿರುತ್ತಾರೆ. ನಂತರ ನಾನು ಈ ದಾಳಿಯ ಬಗ್ಗೆ ವಿವರಣೆನೀಡಿ ನೋಟೀಸನ್ನು ನೀಡಿರುತ್ತೇನೆ. ಆ ನೋಟೀಸನ್ನು ನಿಶಾನೆ ಪಿ**2** ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**2(**ಬಿ**)** ಎಂದು ಗುರುತಿಸಲಾಯಿತು.

5. ನಂತರ ನಾನು, ಪತ್ರಾಂಕಿತ ಅಧಿಕಾರಿ, ಪಂಚರು, ಸಿಬ್ಬಂದಿ ಶಾಂತಕುಮಾರ್, ಕಾನೂನು ಮಾಪನ ಇಲಾಖೆಯ ಅಧಿಕಾರಿ ರಾಘವೇಂದ್ರ, ಸಿಬ್ಬಂದಿಯವರು ಇಲಾಖಾ ವಾಹನದಲ್ಲಿ ಘಟನಾ ಸ್ಥಳಕ್ಕೆ ಫಿರ್ಯಾದಿ ತೋರಿಸಿದಂತೆ ಹೋದೆವು. ನಾವು ಹೋಗುವಾಗ ಲ್ಯಾಪ್ ಟಾಪ್, ಪ್ರಿಂಟರ್ ಅನ್ನು ತೆಗೆದುಕೊಂಡು ಹೋಗಿದ್ದೆವು. ಕಾನೂನು ಮಾಪನ ಇಲಾಖೆಯ ಅಧಿಕಾರಿ ರಾಘವೇಂದ್ರ ರವರು ತೂಕ ಮಾಪನವನ್ನು ತಂದಿದ್ದರು. ಸ್ಥಳದಲ್ಲಿ ನಮ್ಮ ಪೋಲೀಸರು ಹಿಡಿದುಕೊಂಡಿದ್ದ

ಇಬ್ಬರು ವ್ಯಕ್ತಿಗಳ ಹೆಸರು ವಿಳಾಸ ಕೇಳಲಾಗಿ ಅಸಾದುಲ್ಲಾ ಶರೀಫ್ ತಂದೆ ನೂರ್ ಮೊಹಮದ್ ಶರೀಫ್, ಮರಳೂರು ದಿಣ್ಣೆ, ತುಮಕೂರು ಎಂದು ಮತ್ತು ಇನ್ನೊಬ್ಬ ಅಯೂಬ್ ಪಾಷ ತಂದೆ ಚಾಂದ್ ಪಾಷ, ಮೆಳೆಕೋಟೆ ರಸ್ತೆ, ತುಮಕೂರು ಎಂದು ಹೇಳಿದರು. ನಾನು ಆರೋಪಿತರನ್ನು ನಿಮ್ಮ ಬಳಿ ಅಮಲು ಬರಿಸುವ ಮಾದಕ ವಸ್ತು ಗಾಂಜಾ ಇದೆಯೇ ಎಂದು ಕೇಳಿದಾಗ ಇಬ್ಬರೂ ನಮ್ಮ ಬಳಿ ಮಾದಕ ವಸ್ತು ಇದೆ ಎಂದು ಹೇಳಿದರು. ನಾನು ಎಲ್ಲಿಂದ ತಂದಿರಿ ಎಂದು ಕೇಳಿದಾಗ ಅಂತರಸನಹಳ್ಳಿ ಬಳಿ ಡಾಬಾದ ಹತ್ತಿರ ಊಟಕ್ಕೆ ನಿಲ್ಲಿಸಿಕೊಂಡಿದ್ದಾಗ ಮಹಾರಾಷ್ಟ್ರದ ಜಲಗಾಂವ್ ನಿಂದ ಬಂದ ಲಾರಿ ಚಾಲಕನಿಂದ ದಿ.**04.06.2022** ರಿಂದ ರಾತ್ರಿ ಸಮಯದಲ್ಲಿ ರೂ.**50** ಸಾವಿರ ಕೊಟ್ಟು ಖರೀದಿ ಮಾಡಿದ್ದೇವೆಂದು ಹೇಳಿದರು. ನಂತರ ಸ್ಥಳದಲ್ಲಿ ರೆಕಾರ್ಡ್ ಆಫ್ ರೀಸನ್ನು ಅನ್ನು ತಯಾರಿಸಿದೆನು. ಅದನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**36** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**36** (ಎ) ಎಂದು ಗುರುತಿಸಲಾಯಿತು.

6. ನಂತರ ಪತ್ರಾಂಕಿತ ಅಧಿಕಾರಿ ಆರೋಪಿತರನ್ನು ಉದ್ದೇಶಿಸಿ ನಿಮ್ಮ ಅಂಗಶೋಧನೆಯನ್ನು ನಾನೇ ಮಾಡಬಹುದಾ ಅಥವಾ ಬೇರೆ ಪತ್ರಾಂಕಿತ ಅಧಿಕಾರಿ ಮಾಡಬೇಕೆ ಎಂದು ಕೇಳಿದಾಗ ನೀವೇ ಅಂಗಶೋಧನೆ ಮಾಡಬಹುದು ಎಂದು ಹೇಳಿದರು. ಪತ್ರಾಂಕಿತ ಅಧಿಕಾರಿ ಅಂಗಶೋಧನಾ ಜ್ಞಾಪನವನ್ನು ತಯಾರಿಸಿದರು. ಅವುಗಳನ್ನು ಈಗಾಗಲೇ ನಿಶಾನೆ ಪಿ**21** ಮತ್ತು **22** ಎಂದು ಗುರುತಿಸಲಾಗಿದೆ. ನಾವೆಲ್ಲಾ ಪರಸ್ಪರ ಅಂಗಶೋಧನೆ ಮಾಡಿಕೊಂಡೆವು, ನಮ್ಮಲ್ಲಿ ಯಾವುದೇ ಮಾದಕ ವಸ್ತು ಇರಲಿಲ್ಲ.

7. ನಂತರ ಆರೋಪಿ ಅಸಾದುಲ್ಲಾ ಶರೀಫನ ಬಳಿ ಮಾದಕ ವಸ್ತು ಇದೆಯೇ ಎಂದು ಕೇಳಿದಾಗ ಹೌದು ಎಂದು ಹೇಳಿ ತನ್ನ ಬಳಿ ಇದ್ದ ಟೇಪಿನಲ್ಲಿ ಸುತ್ತಿದ ಪ್ಯಾಕೇಟನ್ನು ಹಾಜರುಪಡಿಸಿದನು. ನಂತರ ಅದನ್ನು ತೆರೆದು ಪರಿಶೀಲನೆ ಮಾಡಿದಾಗ ಸೊಪ್ಪು, ಬೀಜ ಕಡ್ಡಿಸಹಿತ ಇರುವ ಗಾಂಜಾ ಇರುವುದು ಕಂಡುಬಂದಿತು. ಅದನ್ನು ರಾಘವೇಂದ್ರ ರವರು ತಂದಿದ್ದ ತೂಕದ ಯಂತ್ರದ ಸಹಾಯದಿಂದ ತೂಕ ಮಾಡಿದಾಗ ಒಟ್ಟು **7** ಕೆಜಿ **82** ಗ್ರಾಂ ಇತ್ತು. ಅದನ್ನು ಪ್ರತ್ಯೇಕವಾಗಿ ಬಿಳಿ ಕೋರಾ ಬಟ್ಟೆ ಚೀಲದಲ್ಲಿ ಇಟ್ಟು, ಬಾಯನ್ನು ಕಟ್ಟಿ, **C** ಎಂಬ ಇಂಗ್ಲೀಷ್ ಅಕ್ಷರದಿಂದ

ಸೀಲ್ ಮಾಡಲಾಯಿತು. ನಂತರ ತೂಕ ಮಾಡಿದಾಗ ಅದರ ತೂಕ **7** ಕೆಜಿ **138** ಗ್ರಾಂ ಕಂಡುಬಂದಿತು.

8. ನಂತರ ಅಸಾದುಲ್ಲಾ ಶರೀಫನು ಚಿಕ್ಕ ಪ್ಲಾಸ್ಟಿಕ್ ಜಿಪ್ ಲಾಕ್ ಕವರನ್ನು ಹಿಡಿದುಕೊಂಡಿದ್ದನ್ನು ಹಾಜರುಪಡಿಸಿದ್ದು, ಅದನ್ನು ತೆರೆದು ನೋಡಲಾಗಿ ಅದರಲ್ಲಿ ಎಂಡಿಎಂಎ ಕ್ರಿಸ್ಟಲ್ ಹರಳು ಇದ್ದವು. ಅದನ್ನು ಬೆಂಗಳೂರಿನ ನವಾಜ್ ಎಂಬುವವರಿಂದ ಖರೀದಿ ಮಾಡಿದ್ದು ಎಂದು ಹೇಳಿದನು. ಅದನ್ನು ರಾಘವೇಂದ್ರ ರವರು ತೂಕ ಮಾಡಿದಾಗ ಅದರ ಒಟ್ಟು ತೂಕ **04.05** ಗ್ರಾಂ ತೂಕ ಕಂಡುಬಂದಿತು. ಅದನ್ನು ತಿಳಿಹಸಿರು ಹಣ್ಣಿದ ಪೇಪರ್ ಕವರಿನಲ್ಲಿ ಹಾಕಿ, ಬಾಯಿ ಅಂಟಿಸಿ **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು.

9. ನಂತರ ಮತ್ತೊಬ್ಬ ಆರೋಪಿ ಅಯ್ಯೂಬ್ ಪಾಷನನ್ನು ವಿಚಾರಿಸಲಾಗಿ ಆತ ತನ್ನ ಬಳಿ ಇದ್ದ **25** ಕೆಜಿ ಸಾಮರ್ಥ್ಯದ ಅಕ್ಕಿ ಚೀಲದಲ್ಲಿ ತುಂಬಿದ್ದ ಗಾಂಜಾವನ್ನು ಹಾಜರುಪಡಿಸಿದ್ದು ಅದನ್ನು ತೂಕ ಮಾಡಿದಾಗ ಅದರ ತೂಕ **2** ಕೆಜಿ **849** ಗ್ರಾಂ ತೂಕ ಇತ್ತು. ಅದನ್ನು ಪ್ರತ್ಯೇಕವಾಗಿ ಬಿಳಿ ಕೋರಾ ಬಟ್ಟೆ ಚೀಲದಲ್ಲಿ ಇಟ್ಟು, ಬಾಯನ್ನು ಕಟ್ಟಿ, **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ನಂತರ ತೂಕ ಮಾಡಿದಾಗ ಅದರ ತೂಕ **2** ಕೆಜಿ **892** ಗ್ರಾಂ ಕಂಡುಬಂದಿತು. ನಂತರ ಆರೋಪಿತರು **25** ಚಿಕ್ಕ ಪ್ಲಾಸ್ಟಿಕ್ ಜಿಪ್ ಲಾಕ್ ಕವರುಗಳನ್ನು ಕಾರಿನಲ್ಲಿಟ್ಟಿದ್ದನ್ನು ಹಾಜರುಪಡಿಸಿದ್ದು ಅವುಗಳನ್ನು ತಿಳಿಹಸಿರು ಹಣ್ಣಿದ ಪೇಪರ್ ಕವರಿನಲ್ಲಿ ಹಾಕಿ, ಬಾಯಿ ಅಂಟಿಸಿ, **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ನಂತರ ಸ್ಥಳದಲ್ಲಿ ನಿಂತಿದ್ದ ಟಾಟಾ ಸಫಾರಿ ಕಾರ್ ನಂ.ಕೆಎ **01** ಎಂಡಿ **5009** ಅನ್ನು ತೋರಿಸಿ ಅದೇ ಕಾರನ್ನು ಗಾಂಜಾ ಮತ್ತು ಎಂಡಿಎಂಎ ಸಾಗಾಟ ಮಾಡಲು ಉಪಯೋಗಿಸಿದ್ದು ಎಂದು ಹೇಳಿದರು. ಎಲ್ಲಾ ವಸ್ತುಗಳನ್ನು ವಶಕ್ಕೆ ಪಡೆದು ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದೆನು. ಆ ಮಹಜರನ್ನು ಈಗಾಗಲೇ ನಿಶಾನೆ ಪಿ**3** ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**3**(ಎಫ್) ಎಂದು ಗುರುತಿಸಲಾಯಿತು. ಆ ಮಹಜರಿಗೆ ಪತ್ರಾಂಕಿತ ಅಧಿಕಾರಿ, ನಮ್ಮ ಸಿಬ್ಬಂದಿಯವರು ಮತ್ತು ಪಂಚರು ಸಹಿ ಮಾಡಿದ್ದಾರೆ. ಸ್ಥಳದಲ್ಲಿ ಫೋಟೋಗಳನ್ನು ತೆಗೆಸಿರುತ್ತೇನೆ. ಆ ಫೋಟೋಗಳನ್ನು

ನಿಶಾನೆ ಪಿ**4** ಮತ್ತು **5** ಎಂದು, ಡಿವಿಡಿಯನ್ನು ನಿಶಾನೆ ಪಿ**6** ಎಂದು ಗುರುತಿಸಲಾಗಿದೆ. ಕಾರಿನ ಫೋಟೋಗಳನ್ನು ನಿಶಾನೆ ಪಿ**7** ರಿಂದ **11** ಎಂದು ಗುರುತಿಸಲಾಗಿದೆ. ಜಿಪ್ ಲಾಕ್ ಕವರನ್ನು ಮು ಮಾ **1** ಎಂದು ಗುರುತಿಸಲಾಗಿದೆ.

**10.** ನಂತರ ಆರೋಪಿತರನ್ನು ವಿಚಾರಿಸಿದಾಗ ಅವರು ತಮ್ಮ ಸ್ವ ಇಚ್ಛಾ ಹೇಳಿಕೆ ನೀಡಿದ್ದು, ಅವರು ತಮ್ಮ ಹೇಳಿಕೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ಮಹಾರಾಷ್ಟ್ರ ಲಾರಿ ಚಾಲಕನಿಂದ ಗಾಂಜಾವನ್ನು ಖರೀದಿ ಮಾಡಿದ ಪ್ರದೇಶವನ್ನು ತೋರಿಸುತ್ತೇವೆಂದು ಹೇಳಿದ ಮೇರೆಗೆ ಅವರ ಹೇಳಿಕೆ ದಾಖಲು ಮಾಡಿಕೊಂಡಿರುತ್ತೇನೆ. ಅವರ ಹೇಳಿಕೆಯ ಭಾಗವನ್ನು ನಿಶಾನೆ ಪಿ**37** ಮತ್ತು **38** ಎಂದು ಗುರುತಿಸಲಾಯಿತು. ನಮ್ಮ ಜೊತೆಗೆ ಇದ್ದ ಪತ್ರಾಂಕಿತ ಅಧಿಕಾರಿ, ಪಂಚರನ್ನು ಕೇಳಿಕೊಂಡ ಮೇರೆಗೆ ಅವರು ಮಹಜರಿಗೆ ಬರಲು ಒಪ್ಪಿಕೊಂಡರು.

**11.** ನಂತರ ಬೆಂಗಳೂರು-ಪುಣೆ ಹೈ ವೇ ರಸ್ತೆಯಲ್ಲಿ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದ **ESSAR** ಪೆಟ್ರೋಲ್ ಬಂಕ್ ಮುಂಭಾಗದ ಲಾರಿಗಳು ನಿಲ್ಲುವ ಖಾಲಿ ಸ್ಥಳಕ್ಕೆ ಆರೋಪಿತರು ನಮ್ಮನ್ನು ಕರೆದುಕೊಂಡು ಹೋಗಿ ಸ್ಥಳ ತೋರಿಸಿದರು. ಸ್ಥಳದಲ್ಲಿ ಯಾವುದೇ ವಾಹನ ಇರಲಿಲ್ಲ. ಆ ಸ್ಥಳದಲ್ಲಿ ನಿಶಾನೆ ಪಿ**12** ರಂತೆ ಮಹಜರ್ ಮಾಡಿರುತ್ತೇನೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**12(ಇ)** ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ತೆಗೆದಂತಹ ಫೋಟೋಗಳನ್ನು ನಿಶಾನೆ ಪಿ**13** ಮತ್ತು **14** ಎಂದು ಗುರುತಿಸಲಾಗಿದೆ.

**12.** ನಂತರ ಆರೋಪಿತರು ಮತ್ತು ಮಾಲುಗಳೊಂದಿಗೆ ಠಾಣೆಗೆ ವಾಪಸ್ ಬಂದು, ಅಮಾನತ್ತುಪಡಿಸಿಕೊಂಡ ಮುದ್ದೇಮಾಲುಗಳನ್ನು ಮಾಲುಪಟ್ಟಿಯಲ್ಲಿ ಅಳವಡಿಸಿ, ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಆರೋಪಿತರನ್ನು ದಸ್ತಗಿರಿ ಮಾಡಿ, ದಸ್ತಗಿರಿ ಕ್ರಮ ಅನುಸರಿಸಿ, ವೈದ್ಯಕೀಯ ತಪಾಸಣೆಗೆ ಒಳಪಡಿಸಿ, ರಿಮ್ಯಾಂಡ್ ಅರ್ಜಿಯೊಂದಿಗೆ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಪಂಚರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ. ದಾಳಿ ಯಶಸ್ವಿಯಾದ ಬಗ್ಗೆ ನನ್ನ ಮೇಲಧಿಕಾರಿಗಳಿಗೆ ಪತ್ರವನ್ನು ಬರೆದು ತಿಳಿಸಿರುತ್ತೇನೆ. ಅದನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**39** ಎಂದು,

ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**39**(ಎ) ಎಂದು ಗುರುತಿಸಲಾಯಿತು.

13. ನಂತರ ಜಪ್ತುಪಡಿಸಿಕೊಂಡ ಮುದ್ದೇಮಾಲುಗಳ ಇನ್ವೆಂಟರಿ ಮಾಡಲು ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ದಿ.**16.06.2022** ರಂದು ಮತ್ತು ದಿ.**17.06.2022** ರಂದು ಕಾನೂನು ಮಾಪನ ಶಾಸ್ತ್ರ ಇಲಾಖೆಗೂ ಮತ್ತು ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ ಕುಣಿಗಲ್ ರಸ್ತೆ ಇವರಿಗೆ ಪತ್ರ ಬರೆದು ಕಾನೂನು ಮಾಪನ ಇಲಾಖೆಯ ಅಧಿಕಾರಿ ಮತ್ತು ಪಂಚರನ್ನು ಕಳುಹಿಸಬೇಕೆಂದು ಕೋರಿರುತ್ತೇನೆ. ಆ ಎರಡು ಪತ್ರಗಳನ್ನು ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ**40** ಮತ್ತು **41** ಎಂದು, ಅವುಗಳಲ್ಲಿರುವ ನನ್ನ ಸಹಿಗಳನ್ನು ನಿಶಾನೆ ಪಿ**40**(ಎ) ಮತ್ತು **41**(ಎ) ಎಂದು ಗುರುತಿಸಲಾಯಿತು.

14. ದಿ.**17.06.2022** ರಂದು ತುಮಕೂರಿನ **3** ನೇ ಅಧಿಕ ಹಿರಿಯ ದಿವಾಣಿ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯಕ್ಕೆ ನಾನು, ಪಂಚರು, ಕಾನೂನು ಮಾಪನ ಶಾಸ್ತ್ರ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಬಂದು ನಾವು ಅಮಾನತ್ತುಪಡಿಸಿಕೊಂಡ ಮುದ್ದೇಮಾಲುಗಳನ್ನು ಹಾಜರುಪಡಿಸಿ, ಸ್ಯಾಂಪಲ್ ಸಲುವಾಗಿ ಇಬ್ಬರು ಆರೋಪಿತರಿಂದ ವಶಪಡಿಸಿಕೊಂಡ ಗಾಂಜಾದಲ್ಲಿ ತಲಾ **50** ಗ್ರಾಂ ಗಾಂಜಾವನ್ನು ಪ್ರತ್ಯೇಕಿಸಿ, ಬಿಳಿ ಬಟ್ಟೆ ಚೀಲದಲ್ಲಿ ಇಟ್ಟು, ಬಾಯನ್ನು ಕಟ್ಟಿ, **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು.ಎಂಡಿಎಂಎ ಪೈಕಿ **04.05** ಗ್ರಾಂ ತೂಕದ ಎಂಡಿಎಂಎ ಅನ್ನು ಪ್ರತ್ಯೇಕಿಸಿ ಕವರಿನಲ್ಲಿ ಹಾಕಿ ಭದ್ರಪಡಿಸಿ **C** ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಲಾಯಿತು. ಆ ಸಮಯದಲ್ಲಿ ಫೋಟೋ ತೆಗೆಸಲಾಯಿತು. ಆ ಫೋಟೋಗಳನ್ನು ನಿಶಾನೆ ಪಿ**16** ರಿಂದ **19** ಎಂದು ಗುರುತಿಸಲಾಗಿದೆ. ಸಿಡಿಯನ್ನು ನಿಶಾನೆ ಪಿ**20** ಎಂದು ಗುರುತಿಸಲಾಗಿದೆ. ಮಹಜರನ್ನು ಈಗಾಗಲೇ ನಿಶಾನೆ ಪಿ**15** ಎಂದು ಗುರುತಿಸಲಾಗಿದ್ದು ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**15**(ಸಿ) ಎಂದು ಗುರುತಿಸಲಾಯಿತು. ಸ್ಯಾಂಪಲ್ ಗಳನ್ನು ಮು ಮಾ **2** ರಿಂದ **4** ಎಂದು ಗುರುತಿಸಲಾಗಿದೆ.

15. ದಿ.**21.06.2022** ರಂದು ಅಮಾನತ್ತುಪಡಿಸಿಕೊಂಡ ಸ್ಯಾಂಪಲ್ ಗಾಂಜಾ ಮತ್ತು ಎಂಡಿಎಂಎ ಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಲಾಯಿತು. ಅದನ್ನು ಕೊಟ್ಟ ಬಗ್ಗೆ ಸ್ವೀಕೃತಿ ಪತ್ರವನ್ನು ಪಡೆದಿರುತ್ತೇನೆ. ಆ ಪತ್ರವನ್ನು ನೋಡುತ್ತಿದ್ದು

ಅದನ್ನು ನಿಶಾನೆ ಪಿ**42** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**42**(ಎ) ಎಂದು ಗುರುತಿಸಲಾಯಿತು.

16. ಸದರಿ ಗಾಂಜಾ ಮತ್ತು ಎಂಡಿಎಂಎ ನ್ನು ನವಾಜ್ ರವರಿಂದ ಖರೀದಿ ಮಾಡಿದ್ದೇವೆಂದು ಹೇಳಿದ್ದರಿಂದ ಆತನ ಪತ್ತೆಗಾಗಿ ಸಿಬ್ಬಂದಿಯನ್ನು ನೇಮಕ ಮಾಡಿರುತ್ತೇನೆ. **3** ನೇ ಆರೋಪಿ ಪತ್ತೆಯಾಗಲಿಲ್ಲ ಎಂದು ಸಿಬ್ಬಂದಿಯವರು ವರದಿ ನೀಡಿರುತ್ತಾರೆ. ಆ ವರದಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ**43** ರಿಂದ **45** ಎಂದು ಗುರುತಿಸಲಾಯಿತು.

17. ನಂತರ ಎಫ್ ಎಸ್ ಎಲ್ ನಿಂದ ದಿ.**28.08.2022** ರಂದು ವರದಿ ಬಂದಿದ್ದು, **3** ನೇ ಆರೋಪಿ ತಲೆಮರೆಸಿಕೊಂಡಿದ್ದಾನೆಂದು ಹೇಳಿ, ತನಿಖೆ ಪೂರ್ಣಗೊಳಿಸಿ, ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ಎಫ್ ಎಸ್ ಎಲ್ ವರದಿ ಮತ್ತು ಮಾದರಿ ಮೊಹರನ್ನು ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಶಾನೆ ಪಿ**25** ಮತ್ತು **26** ಎಂದು ಗುರುತಿಸಲಾಗಿದೆ. ಆ ದಿನ ಸಿಕ್ಕಿದ ಆಸಾಮಿಗಳು ಈಗ ನ್ಯಾಯಾಲಯದ ಮುಂದೆ ಆರೋಪಿತರಾಗಿದ್ದಾರೆ.

18. **3** ನೇ ಆರೋಪಿ ನ್ಯಾಯಾಲಯಕ್ಕೆ ಶರಣಾಗತನಾಗಿದ್ದು ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿದ್ದು, ನಂತರ ಆತನನ್ನು ಪೋಲೀಸ್ ಕಸ್ಟಡಿಗೆ ತೆಗೆದುಕೊಂಡು ಆತನ ಸ್ವ ಇಚ್ಛಾ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. **3** ನೇ ಆರೋಪಿ ತನ್ನ ಹೇಳಿಕೆಯಲ್ಲಿ ನನ್ನನ್ನು ಕರೆದುಕೊಂಡು ಹೋದರೆ ತನಗೆ ಅಪರಿಚಿತ ವ್ಯಕ್ತಿ ಎಂಡಿಎಂಎ ತಂದುಕೊಡುತ್ತಿದ್ದ ಹಾಗೂ ತಾನು ಕೆಲಸ ಮಾಡುತ್ತಿದ್ದ ಮಂಗಮ್ಮನ ಪಾಳ್ಯದ ಪಂಕ್ಚರ್ ಅಂಗಡಿಯನ್ನು ತೋರಿಸುತ್ತೇನೆ ಎಂದು ಹೇಳಿಕೆಯನ್ನು ನೀಡಿರುತ್ತಾನೆ. ಆ ಹೇಳಿಕೆಯ ಭಾಗವನ್ನು ನಿಶಾನೆ ಪಿ**46** ಎಂದು ಗುರುತಿಸಲಾಯಿತು.

19. ದಿ.**31.01.2023** ರಂದು ಸ್ಯಾಮ್ಯುಯಲ್ ಮತ್ತು ಪ್ರಮೋದ್ ರವರನ್ನು ಪಂಚರಾಗಿ ಬರಮಾಡಿಕೊಂಡು, ಅವರಿಗೆ ನೋಟೀಸ್ ನೀಡಿ, **3** ನೇ ಆರೋಪಿ ತೋರಿಸುತ್ತೇನೆಂದು ಹೇಳಿದ ಸ್ಥಳಕ್ಕೆ ಹೋಗಿರುತ್ತೇವೆ. ಆ ನೋಟೀಸನ್ನು ನಿಶಾನೆ ಪಿ**29** ಎಂದು ಗುರುತಿಸಲಾಗಿದೆ. ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ

ಪಿ29(ಸಿ) ಎಂದು ಗುರುತಿಸಲಾಯಿತು.

20. ನಂತರ 3 ನೇ ಆರೋಪಿ ನಮ್ಮನ್ನು ಬೆಂಗಳೂರು ನಗರ, ಹೊಸೂರು ಮುಖ್ಯ ರಸ್ತೆಯ ಸರ್ವೀಸ್ ರಸ್ತೆಯಲ್ಲಿ ಮಂಗಮ್ಮನ ಪಾಳ್ಯದ ಗಾರೆಪಾಳ್ಯ ಆಟೋ ಸ್ಟಾಂಡ್ ಹತ್ತಿರ ಇರುವ ಹೆಚ್ ಕೆ ಜಿ ಎನ್ ಪಂಕ್ಚರ್ ಅಂಗಡಿಯ ಮುಂಭಾಗಕ್ಕೆ ಕರೆದುಕೊಂಡು ಹೋದನು. ಆ ಸ್ಥಳದಲ್ಲಿ ಈಗ ನನಗೆ ತೋರಿಸಿದ ನಿಶಾನೆ ಪಿ30 ರಂತೆ ಮಹಜರ್ ಮಾಡಿರುತ್ತೇನೆ. ಆ ಮಹಜರಿನಲಿರುವ ನನ್ನ ಸಹಿಯನ್ನು ನಿಶಾನೆ ಪಿ30(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ನಿಶಾನೆ ಪಿ31 ಮತ್ತು 32 ರಂತೆ ಫೋಟೋ ತೆಗೆಸಿರುತ್ತೇನೆ. ಅಮಾನತ್ತುಪಡಿಸಿಕೊಂಡ ಮಾಲನ್ನು **Drug disposal committee** ಗೆ ಕೊಟ್ಟ ಬಗ್ಗೆ ಸ್ವೀಕೃತಿ ಪತ್ರವನ್ನು ನೋಡುತ್ತಿದ್ದು, ಅದನ್ನು ನಿಶಾನೆ ಪಿ47 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಆರ್.ವಿ.ದೊಡ್ಡಶಾಣಯ್ಯ ವಕೀಲರಿಂದ 3 ನೇ ಆರೋಪಿತನ ಪರವಾಗಿ :**

21. ನಾನು ಇವತ್ತು ಕೇಸ್ ಡೈರಿ ತಂದಿಲ್ಲ. ಶಾಂತಕುಮಾರನನ್ನು ನೇಮಕ ಮಾಡಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. 3 ನೇ ಆರೋಪಿಯನ್ನು ಪತ್ತೆ ಹಚ್ಚಲು ಸಿಬ್ಬಂದಿಯನ್ನು ನೇಮಕ ಮಾಡಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿಲ್ಲ. ನವಾಜ್ ಎಂಬುವವರಿಂದ ಖರೀದಿ ಮಾಡಿದ್ದೇನೆಂದು 1 ನೇ ಆರೋಪಿ ಸ್ವ ಇಚ್ಛಾ ಹೇಳಿಕೆಯನ್ನು ನೀಡಿರುತ್ತಾನೆ. ಆ ಸಮಯದಲ್ಲಿ 1 ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯ ಆಧಾರದ ಮೇರೆಗೆ ನಾನು ಮಂಗಮ್ಮನ ಪಾಳ್ಯಕ್ಕೆ ಹೋಗಿಲ್ಲ. ಮಂಗಮ್ಮನ ಪಾಳ್ಯದ ಹೆಚ್ ಕೆ ಜಿ ಎನ್ ಪಂಕ್ಚರ್ ಅಂಗಡಿಗೆ ಆ ಸಮಯದಲ್ಲಿ ಹೋಗಿಲ್ಲ. ಮಂಗಮ್ಮನ ಪಾಳ್ಯದ ಹೆಚ್.ಕೆ.ಜಿ.ಎನ್ ಪಂಕ್ಚರ್ ಅಂಗಡಿ ಮುಂಭಾಗಕ್ಕೆ ಹೋಗಿದ್ದೇನೆಂದು ಹೇಳುವ ಕಾಲಕ್ಕೆ ಅಂಗಡಿಯ ಮಾಲೀಕರನ್ನು ವಿಚಾರಿಸಿಲ್ಲ. ನಿಶಾನೆ ಪಿ31 ಮತ್ತು 32 ಫೋಟೋಗಳನ್ನು ನಟರಾಜ್ ರವರು ತೆಗೆದರು. ನಿಶಾನೆ ಪಿ30 ರಲ್ಲಿ ನಟರಾಜ್ ಫೋಟೋ ತೆಗೆದಿದ್ದಾರೆಂದು ಬರೆದಿಲ್ಲ. ಮಹಜರಿನಲ್ಲಿ ಅವರ ಸಹಿ ಇಲ್ಲ. ನಟರಾಜ್ ರವರು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿ ಪ್ರಮಾಣಪತ್ರ ಕೊಟ್ಟಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯ ಜೊತೆಗೆ

ಮಂಗಮ್ಮನಪಾಳ್ಯಕ್ಕೆ ಮಧ್ಯಾಹ್ನ 12.00 ಗಂಟೆಗೆ ಹೊರಟೆವು. ನಾನಾಗಲೀ, 3 ನೇ ಆರೋಪಿಯಾಗಲೀ, ಸಿಬ್ಬಂದಿಯಾಗಲೀ ಮತ್ತು ಪಂಚರಾಗಲೀ ಮಂಗಮ್ಮನಪಾಳ್ಯಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಪಂಚಾಯತುದಾರರಿಗೆ ನೋಟೀಸ್ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ30 ನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಠಾಣೆಯಲ್ಲಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ31 ಮತ್ತು 32 ಫೋಟೋಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಪಿ31 ಮತ್ತು 32 ಫೋಟೋಗಳಲ್ಲಿ ಕಾಣುವ ಅಂಗಡಿಯಲ್ಲಿ ಹೆಚ್ ಕೆ ಜಿ ಎನ್ ಹೆಸರಿಲ್ಲ ಎಂದರೆ ಸರಿಯಲ್ಲ. ಈಗಿನ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ನಮ್ಮ ಠಾಣೆಯ ಪಕ್ಕದಲ್ಲಿ ಫೋಟೋಗಳನ್ನು ತೆಗೆಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಮುಂದೆ ಯಾವುದೇ ಸ್ವ ಇಚ್ಛಾ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳು ಲಭ್ಯವಾದಿದ್ದರೂ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ 3 ನೇ ಆರೋಪಿಯ ಬಗ್ಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಶಪಡಿಸಿಕೊಂಡಿದ್ದೇವೆಂದು ಹೇಳುವ ಗಾಂಜಾ ಮತ್ತು ಎಂಡಿಎಂಎ ಗೂ 3 ನೇ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯ ವಿರುದ್ಧ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಡಿ.ಎ.ಜಗದೀಶ್ ವಕೀಲರಿಂದ 1 ಮತ್ತು 2 ನೇ ಆರೋಪಿತರ ಪರವಾಗಿ:**

(ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು).

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು